**ದಿನಾಂಕಃ 10-03-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಮಾನ್ಯ ವಕೀಲರಿಂದ.**

ನನ್ನ ಮುಖ್ಯ ವಿಚಾರಣಾ ಸಾಕ್ಷ್ಯವನ್ನು ಪ್ರಮಾಣ ಪತ್ರದ ರೂಪದಲ್ಲಿ ಸಲ್ಲಿಸಿದ್ದೇನೆ. ಅದರಲ್ಲಿರುವ ವಿಚಾರಗಳನ್ನು ನಾನೇ ಹೇಳಿ ಬರೆಯಿಸಿ ರುಜು ಮಾಡಿದ್ದು ಅದರಲ್ಲಿರುವ ವಿಚಾರಗಳು ಸತ್ಯವಾಗಿವೆ.

ಪ್ರಥಮ ವರ್ತಮಾನ ವರದಿಯ ದೃಢೀಕೃತ ಪ್ರತಿಯನ್ನು **ನಿಪಿ 1** ಎಂದು, ದೂರಿನ ದೃಢೀಕೃತ ಪ್ರತಿಯನ್ನು **ನಿಪಿ 2** ಎಂದು, ಪೊಲೀಸ್ ಇಂಟಿಮೇಷನ್ ನ ದೃಢೀಕೃತ ಪ್ರತಿಯನ್ನು **ನಿಪಿ 3** ಎಂದು, ಸ್ಥಳ ಪಂಚನಾಮೆಯ ದೃಢೀಕೃತ ಪ್ರತಿಯನ್ನು **ನಿಪಿ 4** ಎಂದು, ಕೃತ್ಯ ನಡೆದ ಸ್ಥಳದ ಕಚ್ಚಾ ನಕ್ಷೆಯ ದೃಢೀಕೃತ ಪ್ರತಿಯನ್ನು **ನಿಪಿ 5** ಎಂದು, ಮೋಟಾರು ವಾಹನ ಕಯ್ದೆಯ ಕಲಂ 133 ರಡಿ ನೀಡಿರುವ ನೋಟೀಸು ಮತ್ತು ಸದರಿ ನೋಟೀಸಿಗೆ ನೀಡಿರುವ ಉತ್ತರದ ದೃಢೀಕೃತ ಪ್ರತಿಗಳನ್ನು ಕ್ರಮವಾಗಿ **ನಿಪಿ 6 ಮತ್ತು 7** ಎಂದು, ಎರಡು ಐಎಮ್‌ವಿ ವರದಿಗಳ ದೃಢೀಕೃತ ಪ್ರತಿಗಳನ್ನು **ನಿಪಿ 8 ಮತ್ತು 9** ಎಂದು, ಗಾಯದ ಪ್ರಮಾಣ ಪತ್ರದ ದೃಢೀಕೃತ ಪ್ರತಿಯನ್ನು **ನಿಪಿ 10** ಎಂದು, ದೋಷಾರೋಪಣ ಪಟ್ಟಿಯ ದೃಢೀಕೃತ ಪ್ರತಿಯನ್ನು **ನಿಪಿ 11** ಎಂದು, ಬಿಡುಗಡೆ ಪತ್ರವನ್ನು ನಿಪಿ-12 ಎಂದು, ನನ್ನ ಆಧಾರ್ ಕಾರ್ಡ್ ಮತ್ತು ಡಿ.ಎಲ್ ಮತ್ತು ಸಿಕ್ಯೂರಿಟಿ ಸರ್ವೀಸ್ ನ ಗುರುತಿನ ಚೀಟಿಯ ನೋಟರೀಕೃತ ಪ್ರತಿಗಳನ್ನು (ಮೂಲ ದಾಖಲೆಗಳೊಂದಿಗೆ ಹೋಲಿಕೆ ಮಾಡಿ ಮೂಲ ದಾಖಲೆಗಳನ್ನು

This is a True Copy of the Court Records Online. Authenticated @ districts.ecourtsindia.com/cnr/KABC020260982023/truecopy/order-2.pdf

ಹಿಂದಿರುಗಿಸಲಾಯಿತು) ಹಾಜರುಪಡಿಸಿದ್ದು ಅವುಗಳನ್ನು **ನಿಪಿ 13 ರಿಂದ 15** ಎಂದು, 13 ವೈದ್ಯಕೀಯ ಬಿಲ್ಲುಗಳ ಒಟ್ಟು ಮೊತ್ತ ರೂ. 77,550/- ಗಳಾಗಿದ್ದು ಅವುಗಳನ್ನು **ನಿಪಿ-16** ಎಂದು, 25 ವೈದ್ಯರ ಸಲಹಾ ಚೀಟಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಒಟ್ಟಾಗಿ **ನಿಪಿ- 17** ಎಂದು, ಎರಡು ಛಾಯಾಚಿತ್ರಗಳನ್ನು **ನಿಪಿ-18 ಮತ್ತು 19** ಎಂದು, ಸಿ.ಡಿ ಯನ್ನು **19 (ಎ)** ಎಂದು, ಎಕ್ಸ್ -ರೇ ಯನ್ನು **ನಿಪಿ-20** ಎಂದು ಗುರುತಿಸಲಾಯಿತು.

**( ವಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಲಾಯಿತು)**

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ).**

**(ಓ.ಹೇ.ಕೇ.ಸ.ಇ.)**

**ಸದಸ್ಯರು, ಎಂ.ಎ.ಸಿ.ಟಿ., ಎಸ್‌ಸಿಸಿಹೆಚ್-08**
**ಬೆಂಗಳೂರು**

This is a True Copy of the Court Records Online. Authenticated @ districts.ecourtsindia.com/cnr/KABC020260982023/truecopy/order-2.pdf